ಎಂಬ ಮನೋಭಾವದಿಂದ ಬೆಳೆಸಿ ರಾಷ್ಟ್ರದ ಅರಣ್ಯ ಸಂಪತ್ತನ್ನು ಹೆಚ್ಚಾಗಲು ಸಹಕಾರವಾಗಲು ಮಾನ್ಯ ಅರಣ್ಯ ಸಚಿವರು ಈ ಬಗ್ಗೆ ಯೋಚನೆ ಮಾಡಬೇಕು. ಅರಣ್ಯ ಅಧಿಕಾರಿಗಳಿದ್ದಾಗಲೂ ಮತ್ತು ಈ ಅರಣ್ಯ ಸಮಿತಿಗಳು ಬಂದಾಗಲು ಎಷ್ಟು ಅಭಿವೃದ್ಧಿಯಾಗಿದೆ ಎಂಬುದನ್ನು ತೌಲನೆ ಮಾಡಿ ನೋಡಿ ಆ ಸಮಿತಿಗಳು ಸದೃಢಗೊಳಿಸುವ ಕೆಲಸ ಮಾಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಕೆ.ಹೆಚ್.ರಂಗನಾಥ್: ಅರಣ್ಯವನ್ನು ಮುಂದುವರೆದವರು, ಹಾಗೂ ಹರಿಜನರು ಒತ್ತುವರಿ ಮಾಡಲು ಅವಕಾಶ ಕೊಡುವುದಿಲ್ಲ, ಯಾರೂ ಒತ್ತುವರಿ ಮಾಡಬಾರದೆಂಬುದಕ್ಕೆ ಕಾನೂನು ಒಂದೇ. ಹರಿಜನರು ಒತ್ತುವರಿ ಮಾಡಿದ್ದಾರೆಂದು ಆದ್ಯತೆ ಮೇಲೆ ಕೊಡಬೇಕೆಂದೇನು ಇಲ್ಲ; ಆ ರೀತಿ ಮಾಡಬಾರದು, ಅರಣ್ಯ ಅವಶ್ಯಕವಾಗಿ ಬೇಕಾಗಿದೆ. ಸಮಿತಿಗಳಿಗೆ ಕೊಡುತ್ತಿರುವ ಆದಾಯವನ್ನು ಹೆಚ್ಚು ಮಾಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿರುವುದು ಒಪ್ಪತಕ್ಕ ವಿಚಾರವಲ್ಲ ಸರ್ಕಾರ ಅದಕ್ಕೆ ಮಾನ್ಯತೆ ಮಾಡುವುದಿಲ್ಲ. ಈ ಕಾರ್ಯಕ್ರಮದ ಬಗ್ಗೆ ಮಾನ್ಯ ಸದಸ್ಯರಿಗೆ ಇನ್ನು ಅರಿವು ಬೇಕಾಗುತ್ತದೆ, ಸರ್ಕಾರದ ಆಜ್ಞೆಯ ಪ್ರತಿಯನ್ನು ಅವರಿಗೆ ಕಳುಹಿಸಿಕೊಡುತ್ತೇವೆ, ಆ ಪ್ರಕಾರ ಅದು ಇವತ್ತು ನಡೆಯುತ್ತಿರುವುದು ಸಾಧುವಾದದ್ದು.

ಹೋಟೆಲ್‌ಗಳಲ್ಲಿನ ಕಾರ್ಮಿಕರಿಗೆ ಕನಿಷ್ಟ ವೇತನ ಕಾಯ್ದೆ ಜಾರಿ.

66(895)

ಶ್ರೀ ದಿನೇಶ್ ಗುಂಡೂರಾವ್(ಗಾಂಧಿಗನರ): ಮಾನ್ಯ ಕಾರ್ಮಿಕ ಮತ್ತು ವಕ್ಫ್‌ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಮಾರು ಶೇಕಡ 70ರಷ್ಟು ಹೋಟೆಲ್‌ಗಳಲ್ಲಿ ಕನಿಷ್ಠ ವೇತನ ಜಾರಿಯಲ್ಲಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ಹೋಟೆಲ್‌ಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಪೂರ್ಣ ಪ್ರಮಾಣದ ಕನಿಷ್ಠ ವೇತನವನ್ನು ಜಾರಿಗೊಳಿಸಲು ಸರ್ಕಾರ ಕ್ರಮ ತೆಗೆದುಕೊಳ್ಳದಿರುವ ಕಾರಣವೇನು?

ಇ) ಕಾರ್ಮಿಕರಿಗೆ ಕನಿಷ್ಠ ವೇತನ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸದಿರುವ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎ.ಎಂ.ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು):

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಇವತ್ತು ಇಡೀ ರಾಜ್ಯದಲ್ಲಾಗಲಿ ಅಥವಾ ಬೆಂಗಳೂರು ನಗರದಲ್ಲಾಗಲಿ ಇರುವ ರೆಸ್ಟೋರೆಂಟ್‌ಗಳಲ್ಲಿರುವ ಕಾರ್ಮಿಕರಿಗೆ ಬಹಳಷ್ಟು ಅನ್ಯಾಯವಾಗುತ್ತಿದೆ, ಅವರಿಗೆ ಸಿಗಬೇಕಾದ ಕನಿಷ್ಟವೇತನ ಸಿಗುತ್ತಿಲ್ಲ, ಇದು ನಿಜವಾದ ಸಂಗತಿಯಾಗಿದೆ. ಕಾರ್ಮಿಕ ಇಲಾಖೆಯ ನಿರೀಕ್ಷಕರು, ಆ ಹೋಟಲ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ನ್ಯಾಯ ಸಿಗಬೇಕಾದ ರೀತಿಯಲ್ಲಿ ಕೆಲಸ ಏನು ಮಾಡಬೇಕಾಗಿದೆ ಅದನ್ನು ಮಾಡುತ್ತಿಲ್ಲ. ನ್ಯಾಯಾಲಯ ಹಾಗೂ ಲೇಬರ್ ಕೋರ್ಟ್‌ಗಳಲ್ಲಿ ಸಾಕಷ್ಟು ಪ್ರಕರಣಗಳು ಪೆಂಡಿಂಗ್ ಇವೆ, ಈ ಬಗ್ಗೆಯು ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಎ.ಎಂ.ಹಿಂಡಸಗೇರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನಮ್ಮ ಇಲಾಖೆ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳಿರುವ ಮಾತು ಸತ್ಯಕ್ಕೆ ದೂರವಾದ ಮಾತು. ಹೋಟಲ್‌ಗಳಲ್ಲಿ ಕಾರ್ಮಿಕರಿಗೆ ಯಾರು ಕನಿಷ್ಟ ವೇತನವನ್ನು ಕೊಡುತ್ತಿಲ್ಲ ಆ ಬಗ್ಗೆ ಸಾಕಷ್ಟು ಗಮನ ಕೊಟ್ಟು ನಮ್ಮ ಇಲಾಖೆ ಕೆಲಸ ಮಾಡುತ್ತಿದೆ. ಬೆಂಗಳೂರು ಸೇರಿದಂತೆ ರಾಜ್ಯದ ಯಾವುದೆ ಭಾಗಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟವಾದ ಪ್ರಕರಣವನ್ನು ನಮ್ಮ ಗಮನಕ್ಕೆ ತಂದಲ್ಲಿ ತನಿಖೆ ಮಾಡಲು ನಾವು ತಯಾರಿದ್ದೇವೆ. ಬೆಂಗಳೂರಿನಲ್ಲಿ ಎಷ್ಟು ಕೇಸ್‌ಗಳು ಪೆಂಡಿಂಗ್ ಇವೆ? ಎಷ್ಟು ಕೇಸ್‌ಗಳು ಇತ್ಯರ್ಥವಾಗಿವೆ ಎನ್ನುವ ಬಗ್ಗೆ ಮಾನ್ಯ ಸದಸ್ಯರು ಅಂಕಿಸಂಖ್ಯೆಗಳನ್ನು ಕೇಳಿದ್ದಾರೆ. ಮಿನಿಮಂ ವೇಜಸ್ ಸಿಗಲಿಲ್ಲ ಎನ್ನುವ ಕಾರಣಕ್ಕಾಗಿ ನಮ್ಮ ಅಧಿಕಾರಿಗಳಿಗೆ ಬಂದಂಥ ಅರ್ಜಿಗಳು 103. ಅದರಲ್ಲಿ 71 ಅರ್ಜಿಗಳನ್ನು ಇತ್ಯರ್ಥ ಮಾಡಿದ್ದು, ಈ 71 ಅರ್ಜಿದಾರರಿಗೆ ಸುಮಾರು 9,26,237 ರೂಪಾಯಿಗಳನ್ನು ಕೊಟ್ಟಿದ್ದೇವೆ. ಮತ್ತು ಇವುಗಳಿಗೆ ಸಂಬಂಧಪಟ್ಟ ಹಾಗೆ ನಾವು ಕೇಸ್‌ಗಳನ್ನೂ ಹಾಕಿದ್ದೇವೆ.

ಶ್ರೀ ದಿನೇಶ್ ಗುಂಡೂರಾವ್: ನನ್ನ ಕ್ಷೇತ್ರದಲ್ಲಿ ಅನೇಕ ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳಿವೆ. ಅಲ್ಲಿಗೆ ಬರತಕ್ಕಂಥ ನಿರೀಕ್ಷಕರು ಕಾರ್ಮಿಕರ ಪರವಾಗಿ ಯಾವುದೇ ರೀತಿ ಪ್ರತಿಪಾದನೆ ಮಾಡುವುದಿಲ್ಲ ಮತ್ತು ಅವರಿಗೆ ಬೆದರಿಕೆಗಳನ್ನು ಹಾಕುವ ರೀತಿಯಲ್ಲಿ ನಡೆಯುತ್ತಿದೆ ಎಂದು ಹೋಟೆಲ್‌ಗಳ ಕಾರ್ಮಿಕರು ಹೇಳುತ್ತಾರೆ.

ಕಾರ್ಮಿಕರ ಬಗ್ಗೆ ಸರ್ಕಾರ ಬಹಳಷ್ಟು ಹೋರಾಟ ಮಾಡಬೇಕಾಗುತ್ತದೆ. ಏಕೆಂದರೆ ಅವರೇ ಮೂಲಭೂತವಾದಂಥ ವ್ಯಕ್ತಿಗಳು. ಆದ್ದರಿಂದ ಇದರ ಬಗ್ಗೆ ಸರ್ಕಾರ ಕೂಡಲೇ ಸರಿಯಾದಂಥ ಕ್ರಮ ತೆಗೆದುಕೊಳ್ಳಬೇಕು. ಮತ್ತು ಈ ಕಾರ್ಮಿಕರಿಗೆ ಸಿಗತಕ್ಕಂಥ ಕನಿಷ್ಠ ವೇತನವನ್ನು 1994ನೇ ಇಸವಿಯಿಂದಲೂ ಪರಿಷ್ಕರಣೆ ಮಾಡಿಲ್ಲ. ವೇತನ ಪರಿಷ್ಕರಣೆಯಾಗಿ ಏಳು ವರ್ಷಗಳಾಗಿವೆ. ಪ್ರತಿ ಐದು ವರ್ಷಗಳಿಗೊಮ್ಮೆ ರಿವೈಸ್ ಮಾಡಬೇಕು ಎನ್ನುವುದು ಇದ್ದರೂ ಇವತ್ತಿನವರೆಗೂ ಅದನ್ನು ಮಾಡಿಲ್ಲ. ಈಗ ಎಲ್ಲಾ ಬೆಲೆಗಳು ಜಾಸ್ತಿಯಾಗಿವೆ. ಆದರೂ ಇವರ ವೇತನ ಜಾಸ್ತಿಯಾಗಿಲ್ಲ. ಆದ್ದರಿಂದ ಅತಿ ಶೀಘ್ರದಲ್ಲಿ ಅದನ್ನು ಮಾಡಿ ಕಾರ್ಮಿಕರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎ.ಎಂ.ಹಿಂಡಸಗೇರಿ: ಮೊದಲನೆಯ ಪ್ರಶ್ನೆಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ನಿರ್ದಿಷ್ಟವಾಗಿ ಅಂಥ ಪ್ರಕರಣಗಳು ಯಾವುದಾದರೂ ಇದ್ದರೆ ನನಗೆ ಕೊಡಿ, ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಮಿನಿಮಂ ವೇಜಸ್ 1994ರಲ್ಲಿ ರಿವೈಸ್ ಆಗಿದ್ದು, ನಾವು ಬಂದ ನಂತರ ಅದನ್ನು ಪುನಃ ರಿವೈಸ್ ಮಾಡಿದ್ದೇವೆ. ಆದರೆ ನಮ್ಮ ನೋಟಿಫಿಕೇಷನ್ ಅನ್ನು ಕರ್ನಾಟಕ ಹೈಕೋರ್ಟ್‌ನಲ್ಲಿ ಛಾಲೆಂಜ್ ಮಾಡಿದ್ದರು. ಆದರೆ ಈಗ ಅದು ಇತ್ಯರ್ಥವಾಗಿದ್ದು, ಅದನ್ನು ಕೂಡಲೇ ಕಾರ್ಯರೂಪಕ್ಕೆ ತರುತ್ತೇವೆ ಎಂದು ಭರವಸೆ ಕೊಡಲು ಇಚ್ಛಿಪಡುತ್ತೇನೆ.

ಶ್ರೀ ಕೆ.ಬಿ.ಕೋಳಿವಾಡ್: ಸನ್ಮಾನ್ಯ ಅಧ್ಯಕ್ಷರೇ, ಹೋಟೆಲ್‌ಗಳಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರನ್ನು ಗುಲಾಮರನ್ನಾಗಿ ಕಾಣತಕ್ಕಂಥ ಪರಿಸ್ಥಿತಿ ಇರುವುದು ನಮ್ಮ ಗಮನಕ್ಕೆ ಬಂದಿದೆ. ಈ ಬಗ್ಗೆ ನಾನು ಸಚಿವರ ಕಛೇರಿಗೆ ಫೋನ್ ಮಾಡಿ ಹೇಳಿದ್ದೇನೆ ಮತ್ತು ಒಂದು ಪತ್ರವನ್ನೂ ಬರೆದಿದ್ದೇನೆ. ಆದರೂ ಸಹ ಅದು ಇನ್ನೂ ನಿಂತಿಲ್ಲ. ಹೆಚ್ಚು ಸಂಬಳ ಕೊಡಿ ಎಂದು ಕೇಳಿದರೆ ಅವರನ್ನು ಕೆಲಸದಿಂದಲೇ ತೆಗೆದು ಹಾಕಿರತಕ್ಕಂಥ ಅನೇಕ ಉದಾಹರಣೆಗಳು ಇವೆ. ಇಂಥವು ಆಗದ ಹಾಗೆ ತಾವು ನೋಡಿಕೊಳ್ಳುವಿರಾ?

ಶ್ರೀ ಎ.ಎಂ.ಹಿಂಡಸಗೇರಿ: ಮಾನ್ಯ ಸದಸ್ಯರು ನನಗೆ ಬರೆದಿರುವ ಪತ್ರವನ್ನು ಪರಿಶೀಲಿಸಿ ಅಂಥ ವಿಶೇಷವಾದ ಕೇಸ್‌ಗಳಿದ್ದರೆ ಅವರ ಮೇಲೆ ಕಾಯಿದೆ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಸುರೇಶ್ ಕುಮಾರ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರ ಸತ್ಯಕ್ಕೆ ದೂರವಾದುದು ಎಂದು ನನಗೂ ಗೊತ್ತು, ಮಾನ್ಯ ಸಚಿವರಿಗೂ ಗೊತ್ತು. ಇದು ಸರ್ಕಾರೀ ಉತ್ತರ. ಆದರೆ ಶೇಕಡ 70ರಷ್ಟು ಹೋಟೆಲ್‌ಗಳಲ್ಲಿ

ಬಾಲಕಾರ್ಮಿಕರಿರುವುದು ನಿಮ್ಮ ಗಮನಕ್ಕೆ ಬಂದಿದೆಯೇ? ಎಲ್ಲಾ ಕಡೆ ಬಾಲಕಾರ್ಮಿಕರನ್ನು ಇಟ್ಟುಕೊಂಡು, ಅವರಿಂದ ಕೆಲಸ ಮಾಡಿಸಿಕೊಳ್ಳುತ್ತಾ, ಅವರನ್ನು ಯಾವ ರೀತಿ ತೊಂದರೆಗೆ, ಹಿಂಸೆಗೆ ಒಳಮಾಡಲಾಗುತ್ತಿದೆ ಎನ್ನುವುದಾದರೂ ಸಚಿವರಿಗೆ ಗೊತ್ತಿದೆಯೇ? ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ಹೇಳಬೇಕು.

ಶ್ರೀ ಎ.ಎಂ.ಹಿಂಡಸಗೇರಿ: ಮಾನ್ಯ ಸದಸ್ಯರು ಹೇಳುತ್ತಿರುವಂತೆ ಶೇಕಡ 70ರಷ್ಟು ಹೋಟೆಲ್‌ಗಳಲ್ಲಿ ಬಾಲಕಾರ್ಮಿಕರಿದ್ದಾರೆ ಎನ್ನುವುದು ಸರಿಯಲ್ಲ. ಹಾಗೆ ನೋಡಿದರೆ ಈಗಿರುವ ಸುಮಾರು 11 ಸಾವಿರ ಹೋಟೆಲ್‌ಗಳಲ್ಲಿ 8 ಸಾವಿರ ಬಾಲಕಾರ್ಮಿಕರಿದ್ದಾರೆಂದು ಆಗುತ್ತದೆ. ಬಾಲಕಾರ್ಮಿಕರ ಸಲುವಾಗಿ ನಮ್ಮ ಅಧಿಕಾರಿಗಳು ವಿಶೇಷವಾದ ಗಮನ ಹರಿಸಿ ನೋಡುತ್ತಿದ್ದಾರೆ. ಅಂಥ ಪ್ರಕರಣಗಳು ನಿಮ್ಮ ಗಮನಕ್ಕೆ ಬಂದರೆ, ಅದನ್ನು ನಮಗೆ ತಿಳಿಸಿದರೆ ನಾವು ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 5ನೇ ಪಟ್ಟಿಯಲ್ಲಿರುವ 160 ಪ್ರಶ್ನೆಗಳ ಪೈಕಿ 145 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ತೀರ್ಥಹಳ್ಳಿಯಲ್ಲಿ ಕ್ರೀಡಾಂಗಣ ನಿರ್ಮಾಣ.

506(889)

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿಯಲ್ಲಿ ಕ್ರೀಡಾಂಗಣ ನಿರ್ಮಾಣಕ್ಕಾಗಿ ಎಷ್ಟು ಜಾಗವನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ?

ಆ) ಈ ಕ್ರೀಡಾಂಗಣ ನಿರ್ಮಾಣಕ್ಕಾಗಿ ಸರ್ಕಾರ ಅನುದಾನ ಮಂಜೂರು